## 14. ಅಳಿವಿನಂಚಿನಲ್ಲಿದ್ದ ಸ.ಕಿ.ಪ್ರಾ ಶಾಲೆ ಗುಡ್ಡೇ ಆಲಳ್ಳಿಯ ಪ್ರಗತಿಯ ಯಶೋಗಾಥೆ

ಇಂದು ಕರ್ನಾಟಕ ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ಮಕ್ಕಳು ಖಾಸಗೀ ಶಾಲೆಯೆಡೆಗೆ ಮುಖ ಮಾಡುತ್ತಿದ್ದಾರೆ ಎಂಬ ಕೂಗು ಸರ್ವೇ ಸಾಮಾನ್ಯವಾಗಿದೆ. ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲೂ ಅಲ್ಲಲ್ಲಿ ಶಿಕ್ಷಕರ, ಪೋಷಕರ, ಹಳೇ ವಿದ್ಯಾರ್ಥಿಗಳ, ದಾನಿಗಳ ನೆರವಿನೊಂದಿಗೆ ಪುನರುಜ್ಜೀವನಗೊಳ್ಳುತ್ತಿರುವ ಅನೇಕ ಶಾಲೆಗಳನ್ನು ನಾವಿಂದು ಕಾಣಬಹುದು. ಯಾವುದೂ ಅಸಾಧ್ಯವಲ್ಲ ಎಂದು ತಮ್ಮ ಸಾಧನೆಗಳ ಮೂಲಕ ಎಲ್ಲರನ್ನು ತಮ್ಮೆಡೆಗೆ ಆಕರ್ಷಿಸಿರುವ ಅನೇಕ ಶಾಲೆಗಳು ಇಂದು ನಮ್ಮ ನಡುವೆ ಇವೆ.

ಅಳಿವಿನ ಅಂಚಿನಲ್ಲಿರುವ ಸರ್ಕಾರಿ ಶಾಲೆಗಳನ್ನು ಶಿಕ್ಷಕರು ಮತ್ತು ಪೋಷಕರು ಮನಸ್ಸು ಮಾಡಿದರೆ ಹೇಗೆ ಉಳಿಸಿಕೊಂಡು ಉತ್ತಮ ಶಾಲೆಯನ್ನಾಗಿ ರೂಪಿಸಬಹುದು ಎಂದು ತೋರಿಸಿಕೊಟ್ಟಂತಹ ಒಂದು ಶಾಲೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ–ಗುಡ್ಡೇ ಆಲಳ್ಳಿ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ತಾಳಗುಪ್ಪ ಕ್ಲಸ್ಟರ್‌ನಲ್ಲಿರುವ ಒಂದು ಪುಟ್ಟ ಜನವಸತಿ ಪ್ರದೇಶ ಗುಡ್ಡೇ ಆಲಳ್ಳಿ. ಈ ಪುಟ್ಟ ಊರಲ್ಲಿರುವುದೇ ಈ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ. ಈ ಶಾಲೆಯಲ್ಲಿರುವುದು ಒಬ್ಬರೇ ಖಾಯಂ ಶಿಕ್ಷಕರು. ಇವರ ಜೊತೆಯಲ್ಲಿ ಮತ್ತೊಬ್ಬರು ಅತಿಥಿ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಈ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ವೀಣಾ.ಪಿ ಇವರು ಈ ಶಾಲೆಗೆ ವರ್ಗಾವಣೆಯಾಗಿ ಬಂದಾಗ ಇಲ್ಲಿ ಓದುತ್ತಿದ್ದ ಮಕ್ಕಳ ಸಂಖ್ಯೆ ಕೇವಲ 4. ಆದರೆ ಈ ಶಾಲೆಗೆ ಶ್ರೀಮತಿ ವೀಣಾರವರು ಬಂದ ನಂತರ ಅವರು ಹಾಕಿಕೊಂಡ ಹಲವಾರು ಚಟುವಟಿಕೆಗಳ ಕಾರಣದಿಂದಾಗಿ ಕೇವಲ ಮೂರು ವರ್ಷಗಳಲ್ಲಿ ಈ ಶಾಲೆ ತನ್ನ ದಾಖಲಾತಿಯನ್ನು 17ಕ್ಕೆ ಹೆಚ್ಚಿಸಿಕೊಂಡಿದೆ.

ಈ ಶಾಲೆಯು ತುಂಬಾ ಉತ್ತಮವಾದ ಭೌತಿಕ ಸೌಲಭ್ಯಗಳನ್ನು ಹೊಂದಿದೆ. ಉದಾ: ಉತ್ತಮವಾದ ಕೌಂಪೌಂಡ್, ಎರಡು ಸುಸಜ್ಜಿತ ಕೊಠಡಿಗಳು, ಅವಶ್ಯಕ ಕಲಿಕೋಪಕರಣಗಳು, ಸುಂದರ ಕಲಿಕಾ ಚಿತ್ರಗಳನ್ನು ಹೊಂದಿರುವ ಗೋಡೆಗಳು, ಶಾಲಾ ಕೈತೋಟ ಇತ್ಯಾದಿಗಳನ್ನು ಹೊಂದಿರುವುದರ ಜೊತೆಗೆ ಶಾಲಾ ಮಕ್ಕಳಿಗೆ ಬ್ಲೇಜರ್ಸ್‌ಗಳನ್ನು ಸಹ ಖಾಸಗೀ ಶಾಲೆಗಳಿಗಿಂತ ಕಡಿಮೆ ಇಲ್ಲವೆಂಬಂತೆ ಹೊಂದಿದೆ.

ಆದರೂ ಕೂಡ ಮೊದಲಿನಿಂದಲೂ ಈ ಶಾಲೆ ಎದುರಿಸುತ್ತಿದ್ದದ್ದು ದಾಖಲಾತಿ ಸಮಸ್ಯೆಯನ್ನು. ಇದನ್ನು ಮನಗಂಡಂತಹ ಈ ಶಾಲೆಯ ಶಿಕ್ಷಕಿ ತಮ್ಮ ಸ್ನೇಹಿತರ ಜೊತೆಗೂಡಿ ಕ್ರಿಯಾಯೋಜನೆ ತಯಾರಿಸಿ ಅದಕ್ಕೆ ಪೋಷಕರ ಸಹಕಾರವನ್ನು ಪಡೆದು ಈ ಶಾಲೆಯಲ್ಲಿ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಮಾಡಿದ್ದಾರೆ.

ಮುಚ್ಚಿ ಹೋಗುತ್ತಿದ್ದ ಈ ಶಾಲೆಯನ್ನು ಉಳಿಸಿಕೊಳ್ಳಲು ಅನೇಕ ಕ್ರಿಯಾಶೀಲ ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಅಳವಡಿಸಿಕೊಂಡು ಶಾಲೆಯನ್ನು ಎಲ್ಲರೂ ಗುರುತಿಸುವಂತೆ ಮಾಡಿದ್ದಾರೆ. ಅವುಗಳಲ್ಲಿ ಕೆಲವನ್ನು ಪರಿಚಯ ಮಾಡಿಕೊಳ್ಳುವುದಾದರೆ.. ... .. ..

### 1) ಸುಂದರವಾದ, ಸುಸಜ್ಜಿತ ನಲಿಕಲಿ ಕೊಠಡಿ:–

ಈ ಶಾಲೆಯಲ್ಲಿ ನಲಿ–ಕಲಿ ಕೊಠಡಿಯನ್ನು ವಿಶೇಷವಾಗಿ ರೂಪಿಸಲಾಗಿದೆ. ನಲಿ–ಕಲಿ ಕಾರ್ಡ್‌ಗಳನ್ನು ಇಡಲು ನಾವಿನ್ಯಯುತವಾಗಿ ರ್‍ಯಾಕ್ ಸಿಸ್ಟಮ್ ಅನ್ನು ಅಳವಡಿಸಿದ್ದಾರೆ. ವಾಲ್‌ಸ್ಲೇಟ್‌ನ್ನು ಮಕ್ಕಳು ಇಷ್ಟ ಪಡುವ "ಸ್ಲೇಟ್"ನ ಆಕಾರದಲ್ಲಿ ಬರೆಸಲಾಗಿದೆ.

ನಲಿ–ಕಲಿ ತಟ್ಟೆಗಳನ್ನು ವಿಭಿನ್ನವಾಗಿ ರೂಪಿಸುವ ನಿಟ್ಟಿನಲ್ಲಿ ವಿವಿಧ ಪ್ರಾಣಿಗಳನ್ನು ಬರೆಸಲಾಗಿದೆ. ಮೈಲಿಗಲ್ಲುವಾರು, ಮೆಟ್ಟಿಲುವಾರು ಕಲಿಕಾ ಸಾಮಗ್ರಿಗಳನ್ನು ಜೋಡಿಸಿಡಲು ಅವಶ್ಯಕ ಸಾಮಗ್ರಿಗಳನ್ನು ಸಿದ್ಧಪಡಿಸಲಾಗಿದೆ. ಮಕ್ಕಳೇ ಆ ಸಾಮಾಗ್ರಿಗಳನ್ನು ಸ್ವತಃ ತೆಗೆದುಕೊಂಡು ವಿವಿಧ ಕಲಿಕಾ ಚಟುವಟಿಕೆಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತಾರೆ.





## 2) ಇಂಗ್ಲೀಷ್ ಕಾರ್ನರ್:–

ಈ ಶಾಲೆಯ ಮತ್ತೊಂದು ವಿಶೇಷತೆ. ಇಂಗ್ಲೀಷ್ ಕಲಿಕಾ ಕೊಠಡಿ. ಇದು ಸರ್ಕಾರಿ ಶಾಲೆಯಲ್ಲಿ ಒಂದು ಹೊಸ ಪ್ರಯತ್ನವೆಂದೇ ಹೇಳಬಹುದು. ಇಲ್ಲಿ ಆಂಗ್ಲ ವಿಷಯ ಪಾಠ ಮಾಡುವ ಸಮಯದಲ್ಲಿ ಈ ಕೊಠಡಿಗೆ ಮಕ್ಕಳನ್ನು ಕರೆದೊಯ್ಯಲಾಗುತ್ತದೆ. ಇಲ್ಲಿ ಇಂಗ್ಲೀಷ್ ಕಲಿಕೆಗೆ ಸಂಬಂಧಿಸಿದ ಪಠ್ಯಕ್ಕೆ ಹೊರತಾದ, ಚಟುವಟಿಕಾ ಕಾರ್ಡ್‌ಗಳಿವೆ. ಇವುಗಳನ್ನು ಮಕ್ಕಳು ತಮ್ಮ ಬಿಡುವಿನ ಸಮಯದಲ್ಲಿ ಬಳಸಿಕೊಂಡು ತಮ್ಮ ಕಲಿಕಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಇಂಗ್ಲೀಷ್ ಕಲಿಕಾ ದೃಢೀಕರಣಕ್ಕೂ ಕೂಡ ಈ ಕೊಠಡಿಯಲ್ಲಿ ವಾಲ್‌ಸ್ಲೇಟ್ ಅನ್ನು ಅವಶ್ಯಕತೆಗೆ ತಕ್ಕಂತೆ ಚಿತ್ರಿಸಲಾಗಿದೆ. ಹಾಗೇ ಇಂಗ್ಲೀಷ್ ಕಲಿಕಾ ಚಪ್ಪರ ಕೂಡಾ ಸೃಜಿಸಲಾಗಿದೆ. ಜೊತೆಗೆ ಕಲಿಕಾ ಪ್ರಕ್ರಿಯೆ ಏಕಮುಖವಾಗಿರ ಬಾರದೆಂಬ ಉದ್ದೇಶದಿಂದ ಕಲಿಕಾ ಸಾಮಗ್ರಿಗಳನ್ನು ಕಲಿಕೆಗೆ ಪೂರಕವಾಗಿ ಬಳಸಲು ಅನುಕೂಲವಾಗುಂತೆ ಎಲ್ಲಾ ರೀತಿಯ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಲಾಗಿದೆ.

## 3)"ವಾರಕ್ಕೊಂದು ಪರೀಕ್ಷೆ, ತರಗತಿಗೊಬ್ಬ ಟಾಪರ್":–

ತರಗತಿಯಲ್ಲಿ ಕಲಿಕೆಯನ್ನು ಪರಿಣಾಮಕಾರಿಯಾಗಿ ರೂಪಿಸಲು ವಿವಿಧ ನಾವಿನ್ಯಯುತ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಅದರಲ್ಲಿ ಮುಖ್ಯವಾದುದು 'ವಾರಕ್ಕೊಂದು ಪರೀಕ್ಷೆ, ತರಗತಿಗೊಬ್ಬ ಟಾಪರ್'. ಈ ಚಟುವಟಿಕೆಯಲ್ಲಿ ಮಕ್ಕಳಿಗೆ ವಾರಕ್ಕೊಂದು, ತರಗತಿಗೆ ಅನುಗುಣವಾಗಿ ಪಠ್ಯ ಮತ್ತು ಸಹಪಠ್ಯವಿಷಯಗಳಿಗೆ ಸಂಬಂಧಿಸಿದ ಒಂದು ಸಮಸ್ಯೆಯನ್ನು ನೀಡಲಾಗುತ್ತದೆ. ಅದರಲ್ಲಿ ವಿಜೇತರಾದವರಿಗೆ ತರಗತಿಗೊಬ್ಬರಂತೆ ಟಾಪರ್ ಅನ್ನು ಆಯ್ಕೆಮಾಡಿ ಅವರಿಗೆ ಪದಕಗಳನ್ನು ನೀಡಲಾಗುತ್ತಿದೆ. ಆ ಪದಕ ಅವರ ಹತ್ತಿರ ಒಂದು ವಾರದವರೆಗೂ ಇರುತ್ತದೆ. ನಂತರ ಅದನ್ನು ಉಳಿಸಿಕೊಳ್ಳಲು ಅವರು ಹೆಚ್ಚಿನ ಶ್ರಮ ಹಾಕಬೇಕು. ಇದರಿಂದ ಮಕ್ಕಳಲ್ಲಿ ಪ್ರತಿ ವಾರವೂ ಆರೋಗ್ಯಕರ ಸ್ಪರ್ಧೆ ಏರ್ಪಟ್ಟು ಕಲಿಕೆ ಉನ್ನತ ಮಟ್ಟದಲ್ಲಿ ದೃಢೀಕರಣವಾಗುತ್ತಿದೆ.





**4) ಶಾಲಾ ಸಮವಸ್ತ್ರ:–**

ಈ ಶಾಲೆಯ ಇನ್ನೊಂದು ವಿಶೇಷತೆ ಶಾಲಾ ಸಮವಸ್ತ್ರ. ಶಾಲೆಯ ಪೋಷಕರು ತಮ್ಮ ಮಕ್ಕಳು ಯಾವ ಖಾಸಗಿ ಶಾಲೆಗಳ ಮಕ್ಕಳಿಗೂ ಕಡಿಮೆ ಇಲ್ಲದಂತೆ ಮಕ್ಕಳಿಗೆ ಬ್ಲೇಜರ್ಸ್ ಹೊಲಿಸಿಕೊಟ್ಟಿದ್ದಾರೆ. ಇವರ ಈ ಶ್ರಮದಿಂದ ಶಾಲಾ ದಾಖಲಾತಿಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಮಕ್ಕಳು ಹಳ್ಳಿಯಲ್ಲಿ ಶೂ, ಬ್ಲೇಜರ್ಸ್ ಹಾಕಿಕೊಂಡು ಹೆಮ್ಮೆಯಿಂದ ಶಾಲೆಯ ಕಡೆಗೆ ಬರುವುದನ್ನು ನೋಡುವುದೇ ಒಂದು ಚಂದ. ಪೋಷಕರಿಗೆ ಹೆಮ್ಮೆ.





**5) ಕ್ರಿಯಾಶೀಲ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ:–**

ಈ ಶಾಲೆಯು ಉತ್ತಮ ಮತ್ತು ಕ್ರಿಯಾಶೀಲ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯನ್ನು ಹೊಂದಿದೆ. ಈ ಸಮಿತಿಯ ಸರ್ವ ಸದಸ್ಯರೂ ಸೇರಿ ಪ್ರಸ್ತುತ ವರ್ಷದಲ್ಲಿ ಶಾಲೆಗೆ ತುಂಬಾ ಸುಂದರವಾದ ಸುಮಾರು 17,000ರೂ. ಮೌಲ್ಯದ ಮಹಾದ್ವಾರವನ್ನು ನಿರ್ಮಿಸಿ ಕೊಟಿದಾರೆ. ಪ್ರತಿ ಸಭೆಗೂ ಹಾಜರಾಗಿ ಸೂಕ್ತ ಮಾರ್ಗದರ್ಶನ ಮಾಡುತ್ತಾರೆ. ಶಾಲೆಯ ಯಾವುದೇ ಕೆಲಸಕ್ಕೂ ಬೇಸರಿಸದೆ ಸಹಕಾರ ನೀಡುತ್ತಾರೆ. ಕ್ರಿಯಾಶೀಲ ಅಧ್ಯಕ್ಷರಿದ್ದಾರೆ.

**6) ಹೊಸ ಕನಸುಗಳನ್ನು ಹೊತ್ತ ಕ್ರಿಯಾಶೀಲ ಶಿಕ್ಷಕಿ:–** ಇಲ್ಲಿನ ಶಾಲಾ ಶಿಕ್ಷಕಿ ತುಂಬಾ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಾ, ಅವರ ಸ್ನೇಹಿತರ ಮತ್ತು ದಾನಿಗಳ ಸಹಕಾರದಿಂದ ಶಾಲಾ ಭೌತಿಕ ಸೌಲಭ್ಯಗಳನ್ನು ಅತ್ಯಂತ ಉತ್ತಮವಾಗಿ ನಿರ್ವಹಿಸಿರುತ್ತಾರೆ. ಶಾಲಾ ಶಿಕ್ಷಕಿಯ ಸ್ನೇಹಿತರಾದ ಶ್ರೀ ಶರತ್ ಜೆ, ಶ್ರೀ ಸೋಮಶೇಖರ್ ಕೆ.ಬಿ, ಶ್ರೀಮತಿ ಲಕ್ಷ್ಮಿ ಡಿ. ಆವಿನ, ಡಾ.ದೀಪಾ ಬಿ.ವಿ. ಇವರುಗಳು ಶಾಲೆಯನ್ನು ದತ್ತು ತೆಗೆದುಕೊಂಡು ಶಾಲೆಯನ್ನು ವಿಶೇಷವಾಗಿ ವಿನ್ಯಾಸಗೊಳಿಸಿದ್ದಾರೆ. ಇವರುಗಳೆಲ್ಲರ ಸಹಕಾರದಿಂದ ಅಂದವಾದ ಕೌಂಪೌಂಡ್ ಬರಹ ಮತ್ತು ಉತ್ತಮಗೋಡೆ ಬರಹದಿಂದ ಈ ಶಾಲೆ ಎಲ್ಲರನ್ನೂ ತನ್ನತ್ತ ಸೆಳೆಯುತ್ತಿದೆ.

**7) ಸಹಕಾರಿ ಮನೋಭಾವದ ಅಡುಗೆ ಸಿಬ್ಬಂಧಿ:–** ಈ ಶಾಲೆಯ ಅಡುಗೆ ಸಿಬ್ಬಂದಿಯವರಾದ ಶ್ರೀಮತಿ ನೇತ್ರಾವತಿ ಇವರು ಶಾಲೆಯು ಅಚ್ಚುಕಟ್ಟುತನದಿಂದ ಇರಲು ತಮ್ಮ ಹೆಚ್ಚಿನ ಶ್ರಮ ಹಾಕಿದ್ದಾರೆ. ಎಲ್ಲಾ ಕೆಲಸಕಾರ್ಯಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ

**8) ಶಿಕ್ಷಕಿಯ ಕೈ ಜೋಡಿಸುವ ಅತಿಥಿ ಶಿಕ್ಷಕರು:–** ಈ ವರ್ಷದಿಂದ ಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕುಮಾರಿ ನಿರ್ಮಲಾ ಇವರೂ ಕೂಡ ಕ್ರಿಯಾಶೀಲರಾಗಿ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡಿಸುತ್ತಿದ್ದಾರೆ.

ಈ ಎಲ್ಲ ಸಾಧನೆಗಳಿಗೆ ಕಾರಣವೇನು? ಎಂದು ಶಾಲಾ ಶಿಕ್ಷಕಿಯವರನ್ನು ಕೇಳಿದರೆ ಅವರು ಒಂದೊಂದಾಗಿ ತಮ್ಮ ಕನಸುಗಳನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಶಿವಮೊಗ್ಗ ಡಯಟ್‌ನಲ್ಲಿ ಹಿರಿಯ ಉಪನ್ಯಾಸಕರಾಗಿರುವ ಶ್ರೀಯುತ ಫಣೀಶ್, ಅಲ್ಲಿನ ಇತರ ಉಪನ್ಯಾಸಕರು, ಡಯಟ್ ಪ್ರಾಂಶುಪಾಲರು, ಸಾಗರ ಬಿ.ಇ.ಓ. ಹಾಗೂ ಬಿ.ಆರ್.ಸಿ ಇವರೆಲ್ಲರ ಮಾರ್ಗದರ್ಶನ, ಜೊತೆಗೆ ಅನ್ನ ಕೊಡುವ ಮಕ್ಕಳಿಗೆ

ಏನನ್ನಾದರೂ ಮಾಡಲೇ ಬೇಕೆಂಬ ತನ್ನ ಬಹುದಿನದ ಕನಸು, ಅದಕ್ಕೆ ಒತ್ತಾಸೆಯಾಗಿ ನಿಂತ ಊರಿನ ಪೋಷಕರು, ತನ್ನ ಬಾಲ್ಯ ಸ್ನೇಹಿತರು ಇವರೆಲ್ಲರು ನನ್ನ ಈ ಸಾಧನೆಯ ಬೆನ್ನೆಲುಬೆನ್ನುತ್ತಾರೆ. ಈ ಶಾಲೆಯ ಮಕ್ಕಳ ಕಲಿಕೆಯನ್ನು ಶಾಲೆಗೆ ಭೇಟಿ ನೀಡಿರುವ ಎಲ್ಲಾ ಅಧಿಕಾರಿಗಳೂ ಕೂಲಂಕಷವಾಗಿ ಪರಿಶೀಲಿಸಿ ಮೆಚ್ಚುಗೆಯ ನುಡಿಗಳನ್ನಾಡಿ ಹೋಗಿದ್ದಾರೆ.

ಇಂತಹ ಶಿಕ್ಷಕರ ಸಂತತಿ ನೂರ್ಮಡಿಯಾಗಲಿ. ಇಂತ ಸಾಧನೆಗಳು ಇತರರಿಗೂ ಪ್ರೇರಣೆ ನೀಡಲಿ. ಶಿಕ್ಷಕರು ಮನಸ್ಸು ಮಾಡಿದರೆ ಸಮುದಾಯದ ಸಹಕಾರದಿಂದ ಯಾವ ಶಾಲೆಗಳನ್ನು ಬೇಕಾದರೂ ಉಳಿಸಿಕೊಳ್ಳಬಹುದು ಹಿಂದಿನ ದಿನಗಳ ವೈಭವಕ್ಕೆ ಮರಳಿಸಬಹುದು ಎಂಬುದಕ್ಕೆ ಈ ಶಾಲೆಯು ಉತ್ತಮ ನಿದರ್ಶನ.





